(ii) ಹುಮ್ನಾಬಾದ್‌ನಲ್ಲಿ ದ್ವಿತೀಯ ಪಿ.ಯು.ಸಿ.ಯ ಮರು ಪರೀಕ್ಷೆಯನ್ನು ನಡೆಸಲು ಆದೇಶಿಸಿರುವ ಬಗ್ಗೆ:-

+ **ಶ್ರೀ ಸುಭಾಷ್ ಕಲ್ಲೂರ್ (ಹುಮ್ನಾಬಾದ್)** : ಮಾನ್ಯ ಅಧ್ಯಕ್ಷರೇ, ಕರ್ನಾಟಕ ರಾಜ್ಯದಲ್ಲಿ ಪಿ.ಯು.ಸಿ. ದ್ವಿತಿಯ ಪರೀಕ್ಷೆಗಳು ಮುಗಿದು, ಕೆಲವು ದಿವಸಗಳು ಕಳೆದರೂ ಕೂಡ ನನ್ನ ಕ್ಷೇತ್ರವಾದ ಹುಮ್ನಾಬಾದ್‌ನಲ್ಲಿ ಪಿ.ಯು.ಸಿ. ಪರೀಕ್ಷೆಗಳು ಪುನಃ ನಡೆಯಬೇಕೆಂದು, ಪಿ.ಯು.ಸಿ. ಬೋರ್ಡಿನವರು ಆದೇಶ ಹೊರಡಿಸಿದ್ದಾರೆ. ಈ ವಿಷಯದ ಬಗ್ಗೆ ನಾನು ಬಹಳ ಪ್ರಮುಖವಾದ ವಿಷಯವನ್ನು ತಮ್ಮ ಮೂಲಕ ಈ ಸದನದ ಗಮನಕ್ಕೆ ತರಬಯಸುತ್ತೇನೆ. ಇಡೀ ರಾಜ್ಯದಲ್ಲಿ ಎಲ್ಲಿಯೂ ಕೂಡ ದ್ವಿತೀಯ ಪಿ.ಯು.ಸಿ. ಪರೀಕ್ಷೆಗಳು ಪುನರ್ ಪರೀಕ್ಷೆಗಳಾಗಿಲ್ಲ. ಹುಮ್ನಾಬಾದ್‌ನಲ್ಲಿ ಮಾತ್ರ ಕೆಲವೊಂದು ಅಕ್ರಮಗಳಾಗಿವೆ, ಅವ್ಯವಹಾರ ನಡೆದಿದೆ ಎಂದು ತಿಳಿದುಕೊಂಡು, 4ನೇ ಮೇ ತಿಂಗಳಿನಲ್ಲಿ ಪುನರ್ ಪರೀಕ್ಷೆಗಳನ್ನು ಇಟ್ಟಿದ್ದಾರೆ. ಇದರಿಂದಾಗಿ ವಿದ್ಯಾರ್ಥಿಗಳಿಗೆ ಬಹಳ ಅನ್ಯಾಯವಾಗಿದೆ. ಎರಡು ಸಾವಿರ ವಿದ್ಯಾರ್ಥಿಗಳಿಗೆ ಅನ್ಯಾಯವಾಗಿರುವುದರ ಬಗ್ಗೆ ಖಂಡನೆ ಮಾಡಬೇಕೆಂದು ನಾನು ಹೇಳುತ್ತೇನೆ. ಹುಮ್ನಾಬಾದ್‌ನಲ್ಲಿ ಒಂದನೇ ತಾರೀಖಿನಿಂದ 10ನೇ ತಾರೀಖಿನವರೆಗೂ ಪರೀಕ್ಷೆಗಳು ಮುಗಿದು, ಬಹುತೇಕ ಆರ್ಟ್ಸ್ ಮತ್ತು ಕಾಮರ್ಸ್ ಪರೀಕ್ಷೆಗಳು ಮುಗಿದಿವೆ. ಸೈನ್ಸ್ ಪರೀಕ್ಷೆಯ ಒಂದು ಅಥವಾ ಎರಡು ವಿಷಯಗಳು ಮಾತ್ರ ಉಳಿದಿವೆ. ಪರೀಕ್ಷೆಗಳು ಪೂರ್ಣ ಮುಗಿಯುವ ಹಂತದಲ್ಲಿರುವಾಗ ಪಿ.ಯು.ಸಿ. ಮಂಡಳಿಯ ನಿರ್ದೇಶಕರು ನಡೆದಿರುವ ಪರೀಕ್ಷೆಗಳನ್ನು ರದ್ದು ಮಾಡಿ ಪುನಃ ಪರೀಕ್ಷೆಗಳನ್ನು ನಡೆಸತಕ್ಕಂಥಾದ್ದು ಬಹಳ ಅನ್ಯಾಯವಾಗಿದೆ. ಇಲ್ಲಿ ಯಾವುದೇ ತರಹದ ಅವ್ಯವಹಾರಗಳು ನಡೆದಿಲ್ಲ. ನನ್ನ ಕ್ಷೇತ್ರವಾದ ಹುಮ್ನಾಬಾದ್‌ನಲ್ಲಿ ಎರಡು ಪರೀಕ್ಷಾ ಕೇಂದ್ರಗಳು ಇವೆ. ಒಂದು ಬಾಲಕಿಯರ ಪರೀಕ್ಷಾ ಕೇಂದ್ರ ಇನ್ನೊಂದು ಬಾಲಕರ ಪರೀಕ್ಷಾ ಕೇಂದ್ರ. ಎರಡೂ ಕೇಂದ್ರಗಳಲ್ಲಿ ಎರಡು ಸಾವಿರ ವಿದ್ಯಾರ್ಥಿಗಳು ಪರೀಕ್ಷೆಗೆ ಕುಳಿತ್ತಿದ್ದಾರೆ. ಅವರು ಹೇಳತಕ್ಕಂಥಾದ್ದು ಇಲ್ಲಿ ಅವ್ಯವಹಾರ ಆಗಿದೆ, ಅನ್ಯಾಯಗಳು ಆಗಿದೆ, ಪ್ರಶ್ನೆ ಪತ್ರಿಕೆಗಳು ಹೊರಗೆ ಬಂದಿವೆ ಎನ್ನುವ ಆರೋಪಗಳನ್ನು ಮಾಡಿದ್ದಾರೆ. ಅಲ್ಲಿನ ಕಂಟ್ರೋಲರ್ ಆಫ್ ಎಗ್ಸಾಮಿನೇಶನ್ಸ್ ಅವರು ಅವ್ಯವಹಾರ ನಡೆದಿಲ್ಲ ಎಂದು ಹೇಳಿದ್ದಾರೆ. ಅಲ್ಲಿ Flying Squad ಇಟ್ಟಿದ್ದರು. ಅವರು ಸಹ ಅವ್ಯವಹಾರ ಆಗಿಲ್ಲ ಎಂದು ಹೇಳಿದ್ದಾರೆ. ಮತ್ತು ಸ್ಥಳೀಯ ಸಿಟ್ಟಿಂಗ್ ಸ್ಕ್ವಾಡ್ ಇಟ್ಟಿದ್ದರು ಅವರು ಸಹ ಅವ್ಯವಹಾರ ನಡೆದಿಲ್ಲ ಎಂದು ಹೇಳಿದ್ದಾರೆ. ಅದರ ಜೊತೆಗೆ ಜಾಗ್ರತ ದಳದವರು ಸಹ ಬಂದು ಹೋಗುವಂತಹ ವ್ಯವಸ್ಥೆ ಇತ್ತು. ಅವರು ಸಹ ಎಲ್ಲಾ ಸರಿಯಾಗಿ ನಡೆದಿದೆ ಎನ್ನತಕ್ಕಂಥ ವರದಿಯನ್ನು ಕೊಟ್ಟಿದ್ದಾರೆ. ಇವತ್ತು ಎರಡು ಸಾವಿರ ವಿದ್ಯಾರ್ಥಿಗಳು ತಹಶೀಲ್ದಾರ್ ಕಛೇರಿಯ ಮುಂದೆ ಧರಣಿ ಕುಳಿತಿದ್ದಾರೆ. ಇವತ್ತು ಹುಮ್ನಾಬಾದ್ ನಗರವನ್ನು ಬಂದ್ ಮಾಡಿದ್ದಾರೆ. ಮತ್ತು ಆ ವಿದ್ಯಾರ್ಥಿಗಳು ಕಛೇರಿ ಮುತ್ತಿಗೆ ಹಾಕುತ್ತೇವೆಂದು ಹೇಳಿದ್ದಾರೆ ಮತ್ತು ಆತ್ಮಹತ್ಯೆಯನ್ನು ಸಹ ಮಾಡಿಕೊಳ್ಳುತ್ತೇವೆ ಎನ್ನುವಂತಹ ಒಂದು ಬೆದರಿಕೆಯನ್ನು ಸಹ ಹಾಕಿದ್ದಾರೆ. ನನ್ನ ಗಮನಕ್ಕೆ ಈ ವಿಷಯ ಬಂದಾಗ ನಾನು ಈ ಬಗ್ಗೆ ಕೂಲಂಕಷವಾಗಿ ವಿಚಾರ ಮಾಡಿದೆ. ಅಲ್ಲಿ ಅವ್ಯವಹಾರ ಆಗಿದೆ ಎನ್ನುವ ಬಗ್ಗೆ ಯಾರೂ ಸಹ ತಪ್ಪು ವರದಿಯನ್ನು ಕೊಟ್ಟಿಲ್ಲ. ಮಾನ್ಯ ನಿರ್ದೇಶಕರ ಆದೇಶದ ಮೇರೆಗೆ ಗುಲ್ಬರ್ಗದಿಂದ ಒಬ್ಬರು ಡಿ.ಡಿ. ಅಡಿವಿಯಪ್ಪ ಚಿಂಚೋಳ

ಎನ್ನತಕ್ಕಂಥವರು ಒಬ್ಬರು ಬಂದು ಅಲ್ಲಿ ಅವ್ಯವಹಾರ ನಡೆದಿದೆ ಎನ್ನತಕ್ಕಂಥ ವರದಿಯನ್ನು ಕೊಟ್ಟಿದ್ದಾರೆ. ಆದರೆ ಆ ವರದಿ ತಪ್ಪು ಇದೆ. ಅಲ್ಲಿ ಯಾವುದೇ ಅವ್ಯವಹಾರ ನಡೆದಿಲ್ಲ; ಪರೀಕ್ಷೆಗಳು ಪೂರ್ಣಗೊಂಡಿವೆ. ಉಳಿದ ಒಂದೆರಡು ವಿಷಯಗಳಿಗೆ ಸಂಬಂಧಪಟ್ಟಂತೆ ಬೇಕಾದರೆ ಪುನಃ ಪರೀಕ್ಷೆಗಳನ್ನು ಮಾಡಲಿ, ನಾನು ಮಾನ್ಯ ಮಂತ್ರಿಗಳಲ್ಲಿ ವಿನಂತಿ ಮಾಡುತ್ತೇನೆ ಏನೆಂದರೆ ಆ ವಿದ್ಯಾರ್ಥಿಗಳ ಜೀವ ಉಳಿಸಬೇಕು, ಈಗ ಸಿ.ಇ.ಟಿ. ಪರೀಕ್ಷೆ ಕೂಡ ಎರಡು ಮತ್ತು ಮೂರನೇ ತಾರೀಖಿಗೆ ಡಿಕ್ಲೇರ್ ಆಗಿದೆ. ಈ ವಿದ್ಯಾರ್ಥಿಗಳು ಮತ್ತೆ 4ನೇ ತಾರೀಖಿನಿಂದ ಪರೀಕ್ಷೆಗೆ ಹೋಗಬೇಕಾದರೆ ಅದು ಸಾಧ್ಯವಿಲ್ಲದ ಮಾತು. ತಾವು ಈ ವಿದ್ಯಾರ್ಥಿಗಳಿಗೆ ನ್ಯಾಯ ಒದಗಿಸಿಕೊಡಬೇಕು, ಅಲ್ಲಿ ಯಾವುದೇ ರೀತಿಯ ಅವ್ಯವಹಾರ ನಡೆದಿಲ್ಲ. ಒಬ್ಬ ಅಧಿಕಾರಿ ಕೊಟ್ಟ ವರದಿ ಮೇಲೆ ತಾವು ತೀರ್ಮಾನ ತೆಗೆದುಕೊಂಡಿದ್ದು ತಪ್ಪು. ತಮಗೆ ಏನಾದರೂ ಇನ್ನೂ ಸಂಶಯ ಬಂದರೆ ತಾವು ಮತ್ತೊಬ್ಬ ಅಧಿಕಾರಿಯನ್ನು ಕಳುಹಿಸಿ ವರದಿಯನ್ನು ತರಿಸಿ ನೋಡಿ ಆ ನಂತರ ತೀರ್ಮಾನ ತೆಗೆದುಕೊಳ್ಳಬಹುದು, ಈ ವಿದ್ಯಾರ್ಥಿಗಳಿಗೆ ನ್ಯಾಯ ಒದಗಿಸಿಕೊಡಬೇಕೆಂದು ನಾನು ಕೇಳಿಕೊಳ್ಳುತ್ತೇನೆ.

+ ಶ್ರೀ ಹೆಚ್.ವಿಶ್ವನಾಥ್ (ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು) : ಮಾನ್ಯ ಅಧ್ಯಕ್ಷರೇ, 1-4-2000 ರಿಂದ 17-4-2000 ವರೆಗೂ ರಾಜ್ಯದಲ್ಲಿ ಸುಮಾರು 537 ಪರೀಕ್ಷಾ ಕೇಂದ್ರಗಳಲ್ಲಿ ಎರಡನೇ ಪಿ.ಯು.ಸಿ. ಪರೀಕ್ಷೆಗೆ ಪರೀಕ್ಷೆಗಳು ನಡೆದಿವೆ. ಇದರಲ್ಲಿ ಬೀದರ್ ಜಿಲ್ಲೆಯ ಹುಮ್ನಾಬಾದ್‌ನ ಎರಡು ಪರೀಕ್ಷಾ ಕೇಂದ್ರಗಳಲ್ಲಿ ನಾನು ಬಹಳ ವಿಷಾದದಿಂದ ಹೇಳಬೇಕೆಂದರೆ ಅಲ್ಲಿ ನಡೆದಿರುವುದು ಪರೀಕ್ಷೆಯಲ್ಲ, ಅದು ಒಂದು ಜಾತ್ರೆ. ಆ ಊರಿನವರೆಲ್ಲಾ ಹೋಗಿ ಪರೀಕ್ಷೆಗಳನ್ನು ಬರೆದಿರುವ ಬಗ್ಗೆ ನಮಗೆ ವರದಿಗಳು ಆಗಿದೆ. ಮಾನ್ಯ ಸದಸ್ಯರು ಹೇಳುವ ರೀತಿಯಲ್ಲಿ ಅದು ಊಹಾಪೋಹ ಅಲ್ಲ, ಯಾರದೋ ವರದಿ ಮೇಲೆ ದುರುದ್ದೇಶದಿಂದ ಮಾಡಿದ್ದು ಅಲ್ಲ. ಅಲ್ಲಿ ವಸ್ತು ಸ್ಥಿತಿ ಏನಾಗಿದೆ ಎನ್ನುವುದನ್ನು ಪ್ರತಿದಿವಸ ಅಲ್ಲಿನ ಅಧಿಕಾರಿಗಳು ವರದಿ ಮಾಡಿದ್ದಾರೆ. ಅಲ್ಲಿ ಎಲಿಜಬೆತ್ ಎನ್ನುವ ಒಬ್ಬ ಲೇಡಿ ಡೆಪ್ಯುಟಿ ಡೈರೆಕ್ಟರ್‌ನ್ನು ಹಾಕಿ, ಅವರಿಗೆ ಸಾಧ್ಯವಾಗದೇ ಆಮೇಲೆ ಗುಲ್ಬರ್ಗದಿಂದ ಡೆಪ್ಯುಟಿ ಡೈರೆಕ್ಟರ್ ಆಡವಿಯಪ್ಪ ಚಿಂಚೋಳ ಎನ್ನುವವರಿಗೆ ಪೋಸ್ಟಿಂಗ್ಸ್ ಕೊಟ್ಟಿದ್ದೆವು. ಸ್ಕ್ವಾಡ್ ಹೋದರೆ ಆ ಸ್ಕ್ವಾಡನ್ನು ಕೂಡ ರೂಮ್‌ನಲ್ಲಿ ಕೂಡಿ ಹಾಕಿ, ಇಡೀ ಜನ ಅದಕ್ಕೆ ಸಪೋರ್ಟ್ ಕೊಟ್ಟು ನಾವು ಮಾಸ್ ಕಾಪಿಯಿಂಗ್ ಮಾಡುತ್ತೇವೆಂದು ಹೇಳಿದರೆ ಹೇಗೆ? ಇದನ್ನು ನಾನು ಬಹಳ ನೊಂದು ಹೇಳಬೇಕಾಗುತ್ತದೆ. ಮಾನ್ಯ ಸದಸ್ಯರು ತಾವು ಇಂತಹ ಮಾಸ್-ಕಾಪಿಯಿಂಗ್‌ಗೆ ಪ್ರೋತ್ಸಾಹ, ಬೆಂಬಲ ಕೊಡಬಾರದು. ಇದರಿಂದ ಯಾವ ಮಕ್ಕಳು, ಯಾವ ಪೋಷಕರು, ಇಡೀ ತಮ್ಮ ಎಲ್ಲಾ ಶ್ರಮವನ್ನು ಕೂಡ ಹಾಕಿ ಆ ಮಕ್ಕಳನ್ನು ತಯಾರು ಮಾಡಿರುತ್ತಾರೋ ಅವರಿಗೆ ಅನ್ಯಾಯವಾಗುತ್ತದೆ. ಮತ್ತು ಪರೀಕ್ಷೆಯ ಪಾವಿತ್ರ್ಯತೆಯನ್ನು ಹಾಳು ಮಾಡುವಂಥಾದ್ದು ಆಗುತ್ತದೆ. ಆ ಪರೀಕ್ಷೆಯ ಪಾವಿತ್ರ್ಯತೆಯನ್ನು ಎತ್ತಿ ಹಿಡಿಯುವಂತಹ ಕೆಲಸ ಸರ್ಕಾರದ್ದು. ಅದ್ದರಿಂದ ಆ ಎರಡು ಕೇಂದ್ರಗಳಲ್ಲಿ ಪುನರ್ ಪರೀಕ್ಷೆಯನ್ನು ಮಾಡುವುದಕ್ಕೆ ಸರ್ಕಾರ ಆದೇಶ ಮಾಡಿದೆ. ಆದ್ದರಿಂದ ನಾನು ಮಾನ್ಯ ಸದಸ್ಯರಲ್ಲಿ ವಿನಮ್ರತೆಯಿಂದ ಅರಿಕೆ ಮಾಡಿಕೊಳ್ಳುತ್ತೇನೆ, ಈ ಪರೀಕ್ಷೆಯ ಪಾವಿತ್ರ್ಯತೆಯನ್ನು ಎತ್ತಿ ಹಿಡಿಯುವುದಕೋಸ್ಕರ, ಮತ್ತು ಈ ರಾಜ್ಯದಲ್ಲಿ ಸರ್ಕಾರ ಇದೆ, ಈ

ಬಗ್ಗೆ ಕ್ರಮ ತೆಗೆದುಕೊಳ್ಳುತ್ತದೆ, ಯಾರಿಗೂ ಇಂಥಾದ್ದಕ್ಕೆ ಅವಕಾಶ ಕೊಡುವುದಿಲ್ಲ ಎನ್ನುವುದನ್ನು ತಿಳಿಸುವುದಕೋಸ್ಕರ ಪುನರ್ ಪರೀಕ್ಷೆ ಆಗಬೇಕಾಗುತ್ತದೆ ಮತ್ತು ಇದರಲ್ಲಿ ಒಂದು ನಿಖರತೆಯನ್ನು ಕಾಣಬೇಕಾಗುತ್ತದೆ, ಅದು ಬಿಟ್ಟು ಬೇರೆ ಯಾವ ಉದ್ದೇಶವೂ ಇದರಲ್ಲಿ ಇಲ್ಲ ಎನ್ನತಕ್ಕಂಥ ಮಾತನ್ನು ನಾನು ಹೇಳಬಯಸುತ್ತೇನೆ.

ಶ್ರೀ ಜಗದೀಶ ಶೆಟ್ಟರ್ : ಮಾನ್ಯ ಅಧ್ಯಕ್ಷರೇ, ಇದಕ್ಕೆ ಒಂದೇ ಒಂದು ಕ್ಲಾರಿಫಿಕೇಶನ್. ಇದರಲ್ಲಿ ಸ್ವಲ್ಪ ಅನ್ಯಾಯವಾಗುತ್ತಿದೆ. ಅದಕ್ಕೆ ನಾನು ಹೇಳುವುದೇನೆಂದರೆ ಅಲ್ಲಿ ಮಾಸ್-ಕಾಪಿಯಿಂಗ್ ನಡೆಯುತ್ತಿದೆ ಎನ್ನುವ ಬಗ್ಗೆ ಒಂದೇ ದಿವಸದಲ್ಲಿ ಎರಡು ದಿವಸದಲ್ಲಿ ವರದಿ ತರಿಸಿಕೊಂಡು ರದ್ದು ಮಾಡಿದ್ದರೆ ನಡೆಯುತ್ತಿತ್ತು. ಈಗ ಎಲ್ಲಾ ಪತ್ರಿಕೆಗಳ ಪರೀಕ್ಷೆಗಳು ಮುಗಿದು ಹೋಗಿವೆ. ಈಗ ಪುನರ್ ಪರೀಕ್ಷೆ ಎಲ್ಲಾ ಪತ್ರಿಕೆಗಳಿಗೂ ನಡೆಸುತ್ತಿದ್ದಾರೆ. ಈಗ ಯಾರು ಪರೀಕ್ಷೆಗಳನ್ನು ಬರೆದಿರುತ್ತಾರೋ ಅವರು ಮೆರಿಟ್ ಮೇಲೆ ಬರೆದವರು ಇದ್ದಾರೆ ಬರೆಯದೇ ಇದ್ದವರು ಇದ್ದಾರೆ, ಪುನಃ ಎರಡು ಸಾವಿರ ವಿದ್ಯಾರ್ಥಿಗಳು ಎಲ್ಲಾ ಪತ್ರಿಕೆಗಳಿಗೂ ಪರೀಕ್ಷೆ ಬರೆಯಬೇಕಾಗುತ್ತದೆ. ಅಲ್ಲಿ ಪರೀಕ್ಷೆಗಳು 4ನೇ ತಾರೀಖಿಗೆ ಶುರುವಾಗಿ 15ನೇ ತಾರೀಖು ವರೆಗೂ ನಡೆದಿದೆ. ಪ್ರತಿನಿತ್ಯ ಅಲ್ಲಿಂದ ವರದಿಗಳು ಬರುತ್ತಿದ್ದವು ಅಂತ ಮಾನ್ಯ ಮಂತ್ರಿಗಳು ಹೇಳಿದರು, ಪ್ರತಿದಿವಸ ವರದಿಗಳು ಬರುತ್ತಿದ್ದರೆ ಮರು ದಿವಸವೇ ಪರೀಕ್ಷೆಯನ್ನು ರದ್ದುಪಡಿಸಬೇಕಾಗಿತ್ತು ಪ್ರಶ್ನೆ ಪತ್ರಿಕೆಗಳು ಬಯಲಾಗಿದ್ದು ಕಂಡ ತಕ್ಷಣ ಪರೀಕ್ಷೆಯನ್ನು ರದ್ದು ಮಾಡಬೇಕಾಗಿತ್ತು. ಮಾಸ್ ಕಾಪಿಯಿಂಗ್ ಆ ಕೇಂದ್ರದಲ್ಲಿ ನಡೆದಿದ್ದು ಗೊತ್ತಾದ ತಕ್ಷಣ ಪರೀಕ್ಷೆಯನ್ನು ರದ್ದು ಮಾಡಬೇಕಾಗಿತ್ತು. ಅದು ಬಿಟ್ಟು 17ನೇ ತಾರೀಖುವರೆಗೂ ಕಾದು ಆಮೇಲೆ ಪುನಃ ಪುನರ್ ಪರೀಕ್ಷೆಗೆ ಆದೇಶ ಮಾಡಿದ್ದಾರೆ. ಇದರಿಂದ ಮೆರಿಟ್ ಮೇಲೆ ಬರುವಂತಹ ವಿದ್ಯಾರ್ಥಿಗಳ ಭವಿಷ್ಯ ಹಾಳಾಗುತ್ತದೆ. ಇವತ್ತು ಆ ವಿದ್ಯಾರ್ಥಿಗಳು ಧರಣಿ ಸತ್ಯಾಗ್ರಹ ಮಾಡುವುದಕ್ಕೆ ಹೊರಟಿದ್ದಾರೆ. ಆತ್ಮಹತ್ಯೆ ಮಾಡಿಕೊಳ್ಳುವ ಪರಿಸ್ಥಿತಿಗೆ ಹೋಗಿದ್ದಾರೆ. ಈಗ ಸಿ.ಇ.ಟಿ. ಪರೀಕ್ಷೆ ಬರುತ್ತಿದೆ. ಮತ್ತೆ ಅವರ ಪುನರ್ ಪರೀಕ್ಷೆಗೆ ತಯಾರಿ ಮಾಡಿಕೊಳ್ಳಬೇಕಾಗಿದೆ. ಯಾವುದೋ ಒಂದೆರಡು ಪತ್ರಿಕೆಗಳಿಗೆ ಪುನರ್ ಪರೀಕ್ಷೆ ಮಾಡಿದ್ದರೆ ಅಡ್ಡಿ ಇಲ್ಲ. ಪೂರ್ತಿ ಪುನರ್ ಪರೀಕ್ಷೆ ಮಾಡುತ್ತೇವೆಂದರೆ ಹೇಗೆ? ಇದು ತಪ್ಪು ಅಂತ ನಾನು ಹೇಳುವುದು.

(iii) ಪಿ.ಯು.ಸಿ. ಪರೀಕ್ಷೆಯ ಪ್ರಶ್ನೆ ಪತ್ರಿಕೆಗಳ ಉತ್ತರಗಳನ್ನು ಮೌಲ್ಯಮಾಪನ ಮಾಡದೆ ಬಹಿಷ್ಕಾರ.

+ ಶ್ರೀ ಎಸ್.ಸುರೇಶ್ ಕುಮಾರ್ (ರಾಜಾಜಿನಗರ) : ಮಾನ್ಯ ಅಧ್ಯಕ್ಷರೇ, ಬೆಳಿಗ್ಗೆ ನಾನು ಶೂನ್ಯ ವೇಳೆಯಲ್ಲಿ ಪ್ರಸ್ತಾಪ ಮಾಡಲು ಒಂದು ವಿಷಯವನ್ನು ಕೊಟ್ಟಿದ್ದೇನೆ. ಪಿ.ಯು.ಸಿ. ಪರೀಕ್ಷೆಯ ಪ್ರಶ್ನೆ ಪತ್ರಿಕೆಗಳ ಉತ್ತರಗಳನ್ನು ಮೌಲ್ಯಮಾಪನ ಬಹಿಷ್ಕರಿಸಿರುವುದರಿಂದ ವಿದ್ಯಾರ್ಥಿಗಳಿಗೆ ಬಹಳ ತೊಂದರೆಯಾಗಿದೆ. ಮತ್ತು ಇದು ಅತ್ಯಂತ ಜರೂರಾಗಿದೆ. ಆ ವಿಷಯವನ್ನು ನಾನು ಪ್ರಸ್ತಾಪ ಮಾಡಬೇಕಾಗಿದೆ. ಮಾನ್ಯ ಅಧ್ಯಕ್ಷರೇ ನಾನು ಬಹಳ ನೊಂದ ಮನಸ್ಸಿನಿಂದ ಈ ಸಭೆಯಲ್ಲಿ ಒಂದು ವಿಚಾರವನ್ನು ಪ್ರಸ್ತಾಪ ಮಾಡುತ್ತಿದ್ದೇನೆ. ಮಾನ್ಯ ಮಂತ್ರಿಗಳು ಈಗ ಮಾತನಾಡುವಾಗ ಪರೀಕ್ಷೆ ಎನ್ನುವುದು ಒಂದು ಪಾವಿತ್ರ್ಯತೆ ಎಂದು ಹೇಳಿದರು. ಮೌಲ್ಯ